1.ಸಂತಾಪ ಸೂಚನೆ

ವಿಷಯ: ವಿಧಾನಸಭೆಯ ಮಾಜಿ ಸದಸ್ಯರಾದಶ್ರೀ.ವಿಎಲ್.ಶಿವಪ್ಪ–ನವರು ನಿಧನ ಹೊಂದಿರುವ ಬಗ್ಗೆ

ಮಾನ್ಯ ಸಭಾಧ್ಯಕ್ಷರು:

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ವಿ.ಎಲ್.ಶಿವಪ್ಪ ಅವರು ನಿಧನ ಹೊಂದಿರುತ್ತಾರೆಂದು ಈ ಸದನಕ್ಕೆ ಅತ್ಯಂತ ವಿಷಾಧದಿಂದ ತಿಳಿಸಬಯಸುತ್ತೇನೆ.

ಶಿವಪ್ಪ ಅವರು ದಿನಾಂಕ 15ನೇ ಜನವರಿ 1925 ರಂದು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ವಡೇರಹಳ್ಳಿಯಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದು, ಪ್ರವೃತ್ತಿಯಲ್ಲಿ ಸಮಾಜ ಸೇವಕರಾಗಿದ್ದರು, ಸಹಕಾರ ಕ್ಷೇತ್ರದಲ್ಲಿ ಹಲವಾರು ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದಲ್ಲದೆ ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾಗಿ ಸುಮಾರು 25ವರ್ಷಗಳ ಕಾಲ ಕಾರ್ಯನಿರ್ವಹಿಸಿರುತ್ತಾರೆ ಮತ್ತು ರಾಜ್ಯ ಎಸ್.ಎಲ್.ಡಿ ಹಾಗೂ ಗೃಹ ನಿರ್ಮಾಣ ಸಂಸ್ಥೆಯ ನಿರ್ದೇಶಕರಾಗಿಯೂ ಹಾಗೂ ಶ್ರೀ ಸಿದ್ದಗಂಗಾ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ವಿ.ಎಲ್.ಶಿವಪ್ಪ ಅವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿರುತ್ತಾರೆ.

ವಿ.ಎಲ್.ಶಿವಪ್ಪ ಅವರು 1968ರಲ್ಲಿ ಮತ್ತು 1978 ರಲ್ಲಿ ರಾಜ್ಯ ವಿಧಾನಸಭೆಗೆ ಕ್ರಮವಾಗಿ ಪಿಎಸ್‌ಪಿ ಮತ್ತು ಕಾಂಗ್ರೆಸ್ ಪಕ್ಷದಿಂದ ತಿಪಟೂರು ಕ್ಷೇತ್ರದಿಂದಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀ ವಿ.ಎಲ್.ಶಿವಪ್ಪ ಅವರು ದಿನಾಂಕ 19.07.2012 ರಂದು ನಿಧನ ಹೊಂದಿರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು) :ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿ.ಎಲ್.ಶಿವಪ್ಪನವರು ಸಹಕಾರಿ ರಂಗದಲ್ಲಿ ಬಹಳಷ್ಟು ಉತ್ತಮವಾಗಿ ಕೆಲಸ ಮಾಡಿದಂಥ ವ್ಯಕ್ತಿ ಮತ್ತು ಸಹಕಾರಿ ಕ್ಷೇತ್ರವನ್ನು ಹೆಚ್ಚು ಬಲಯುತ ಮಾಡಲಿಕ್ಕೆ ಹಾಗೂ ಅದಕ್ಕೆ ಇನ್ನೂ ಹೆಚ್ಚು ಒತ್ತು ಕೊಡಲಿಕ್ಕೆ ಕೆಲಸ ಮಾಡಿದಂಥವರು. ಅಷ್ಟೇ ಅಲ್ಲ, ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಕ್ವಿಟ್ ಇಂಡಿಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಅವರು ಎರಡು ಬಾರಿ ವಿಧಾನಸಭಾ ಸದಸ್ಯರಾಗಿ ಕೆಲಸ ಮಾಡಿದ್ದಾರೆ. 1968ರಲ್ಲಿ ಅವರು ಪಿಎಸ್‌ಪಿ ಪಕ್ಷದಿಂದ ಆಯ್ಕೆಯಾಗಿದ್ದರು. ಆ ದಿನಗಳಲ್ಲಿ ಕಾಂಗ್ರೆಸ್

ಪಕ್ಷವನ್ನು ಎದುರಿಸಿ, ಈ ರೀತಿ ರಾಜ್ಯ ಮಟ್ಟದ ಪಕ್ಷಗಳಿಂದ ಆರಿಸಿ ಬರುವುದು ಬಹಳ ಅಪರೂಪವಾಗಿತ್ತು. ಅಂಥಾದ್ದರಲ್ಲಿ ಶಿವಪ್ಪನವರು ಪಿಎಸ್‌ಪಿ ಪಕ್ಷದಿಂದ ಆರಿಸಿ ಬಂದಿದ್ದರು ಎಂದರೆ, ಅವರ ವೈಯಕ್ತಿಕ ಜನಪ್ರಿಯತೆ ಮತ್ತು ಸಂಘಟನಾ ಚಾತುರ್ಯ ಎಷ್ಟಿತ್ತು ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬಹುದು. ಹೀಗೆ 1968ರಲ್ಲಿ ಒಂದು ಸಲ ಪಿಎಸ್‌ಪಿ ಪಕ್ಷದಿಂದ, 1978ರಲ್ಲಿ ಮತ್ತೊಂದು ಸಲ ಕಾಂಗ್ರೆಸ್ ಪಕ್ಷದಿಂದ ತಿಪಟೂರು ಕ್ಷೇತ್ರದಿಂದ ಆರಿಸಿ ಬಂದಿದ್ದರು. ಸಮಾಜದ ಬಗ್ಗೆ ಬಹಳ ಚಿಂತನೆ ಇದ್ದಂಥ ವ್ಯಕ್ತಿ ಮತ್ತು ಇವತ್ತು ಸಹಕಾರಿ ಕ್ಷೇತ್ರದಿಂದ ಹೆಚ್ಚು ಜನರಿಗೆ ಅದರಲ್ಲೂ ರೈತರಿಗೆ ಅನುಕೂಲವಾಗಬೇಕು ಎಂದು ಕೆಲಸ ಮಾಡಿದಂಥವರು ಶಿವಪ್ಪನವರು. ಇವತ್ತು ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತೇನೆ ಮತ್ತು ಅವರ ನಿಧನದಿಂದ ಅವರ ಕುಟುಂಬಕ್ಕೆ ಉಂಟಾಗಿರುವ ದುಃಖವನ್ನು ಭರಿಸುವಂಥ ಶಕ್ತಿಯನ್ನು ಕೊಡಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ತಾವು ತಂದಿರುವ ಈ ಸಂತಾಪ ಸೂಚನಾ ನಿರ್ಣಯಕ್ಕೆ ನಾನು ಬೆಂಬಲವನ್ನು ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ವಿ.ಎಲ್.ಶಿವಪ್ಪನವರು 1925ರಲ್ಲಿ ಹುಟ್ಟಿದಂಥವರು. ನಿನ್ನೆ ಅವರು ನಿಧನ ಹೊಂದಿದ್ದಾರೆ. ನಿನ್ನೆ ನಾವು ನಮ್ಮನ್ನು ಅಗಲಿದವರಿಗೆ ಸಂತಾಪವನ್ನು ವ್ಯಕ್ತ ಮಾಡುವಾಗ ಇವರ ಹೆಸರನ್ನು ಹೇಳಿರಲಿಲ್ಲ. ಶಿವಪ್ಪನವರು ನನಗೆ ಬಹಳ ನಿಕಟವಾಗಿ ಪರಿಚಯವಿದ್ದಂಥವರು. ನಾನು ಜನತಾದಳ ಪಕ್ಷದಲ್ಲಿದ್ದಾಗ, ಇವರು ಕಾಂಗ್ರೆಸ್ ಬಿಟ್ಟು ಸ್ವಲ್ಪ ದಿನ ಜನತಾ ದಳದಲ್ಲಿಯೂ ಕೂಡ ಇದ್ದರು. ಹಾಗಾಗಿ ಇವರ ಪರಿಚಯ ನನಗೆ ಬಹಳ ಚೆನ್ನಾಗಿ ಆಗಿತ್ತು. ಇವರು ಬಹಳ ಒಳ್ಳೆಯ ಮನುಷ್ಯ, ನಿಷ್ಠೂರವಾದಿ ಮತ್ತು ಪ್ರಾಮಾಣಿಕತೆಯಿಂದ ರಾಜಕಾರಣ ಮಾಡಿದಂಥವರು. ಮೊದಲು ಇವರು ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ನಂತರ ಪಿಎಸ್‌ಪಿ ಕಾಂಗ್ರೆಸ್ ಜೊತೆ ಸೇರಿದಾಗ ಇವರೂ ಕಾಂಗ್ರೆಸ್ ಸೇರಿ 1978ರಲ್ಲಿ ಕಾಂಗ್ರೆಸ್ ಪಕ್ಷದಿಂದ ಶಾಸಕರಾದರು.ಒಟ್ಟು ಎರಡು ಸಾರಿ ಶಾಸಕರಾಗಿ ಈ ಸದನದಲ್ಲಿ ಕೆಲಸ ಮಾಡಿದ್ದಾರೆ. ಅವರು ರೈತರ ಬಗ್ಗೆ ಅಪಾರವಾದಂಥ ಕಾಳಜಿಯನ್ನಿಟ್ಟುಕೊಂಡಿದ್ದರು. ಕೃಷಿ ಅಭಿವೃದ್ಧಿಯಾಗಬೇಕು, ರೈತರ ಬದುಕು ಆರ್ಥಿಕವಾಗಿ, ಸಾಮಾಜಿಕವಾಗಿ ಹಸನಾಗಬೇಕು ಎನ್ನುವ ವಿಚಾರವನ್ನಿಟ್ಟುಕೊಂಡು ಕೆಲಸ ಮಾಡುತ್ತಿದ್ದರು. ಅದಕ್ಕಿಂತ ಬಹಳ ಮುಖ್ಯವಾಗಿ, ಅವರು ಸಹಕಾರಿ ಕ್ಷೇತ್ರದಲ್ಲಿ ಬಹಳ ದೀರ್ಘಕಾಲ ಕೆಲಸ ಮಾಡಿದ್ದರು. ಅವರು ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾಗಿ ಸುಮಾರು 25

ವರ್ಷಗಳ ಕಾಲ ಕೆಲಸ ಮಾಡಿದ್ದರು ಎಂದು ಹೇಳಿದ್ದಾರೆ. State Land Development Bank,ಗೃಹ ನಿರ್ಮಾಣ ಸಹಕಾರ ಸಂಘ ಹೀಗೆ ವಿವಿಧ ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡಿ ಅವರು ಒಬ್ಬ ಸಹಕಾರಿ ಧುರೀಣರಾಗಿದ್ದರು ಎನ್ನುವುದನ್ನು ನಾವು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಅವರು ಸ್ವಾತಂತ್ರ್ಯ ಹೋರಾಟದ ಹಿನ್ನಲೆಯಿಂದ ಬಂದಂಥವರು. ಸಾಮಾನ್ಯವಾಗಿ, ಯಾರುಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಿಂದ ರಾಜಕಾರಣಕ್ಕೆ ಬಂದಿರುತ್ತಾರೆ ಅವರ ಮೇಲೆ ಗಾಂಧೀಜಿಯವರ ಪ್ರಭಾವವಿರುತ್ತಿತ್ತು. ಹೀಗೆ ಅವರ ಮೇಲೂ ಗಾಂಧೀಜಿಯವರ ಪ್ರಭಾವವಿದ್ದು, ಸ್ವಾತಂತ್ರ್ಯ ಹೋರಾಟದ ಪ್ರಭಾವವಿತ್ತು, ಅವರೆಲ್ಲರೂ ಸಮಾಜಮುಖಿಯಾಗಿ ಕೆಲಸ ಮಾಡಿದರು ಎನ್ನುವುದನ್ನು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಅವರ ಆದರ್ಶಗಳನ್ನು ನಾವೆಲ್ಲರೂ ಪಾಲನೆ ಮಾಡಬೇಕು. ಯಾರ್ಯಾರು ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಿಂದ ಬಂದಿರುತ್ತಾರೆ, ಯಾರ್ಯಾರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರು, ಅದಕ್ಕಾಗಿ ಜೈಲಿಗೆ ಹೋಗಿದ್ದರು, ಸೆರೆಮನೆ ವಾಸವನ್ನು ಅನುಭವಿಸಿದ್ದರು, ಅವರಿಗೆ ರಾಷ್ಟ್ರದ ಬಗ್ಗೆ,ರಾಷ್ಟ್ರಭಕ್ತಿಯ ಬಗ್ಗೆ ಹೆಚ್ಚು ಬದ್ಧತೆ ಇರುತ್ತಿತ್ತು. ಅಂಥವರು ಈಗ ರಾಜಕಾರಣದಲ್ಲಿ ಕಡಿಮೆಯಾಗುತ್ತಿದ್ದಾರೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲಿ ಮತ್ತು ಅವರ ಕುಟುಂಬ ವರ್ಗದವರಿಗೆ ಅವರ ಸಾವಿನ ದುಃಖವನ್ನು ಭರಿಸುವಂಥ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ಮಾನ್ಯ ವಿ.ಎಲ್.ಶಿವಪ್ಪನವರ ನಿಧನದ ಬಗ್ಗೆ ತಾವು ತಂದಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಅವರು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯ ವಡೇರಹಳ್ಳಿ ಗ್ರಾಮದಲ್ಲಿ ಜನಿಸಿದ್ದು, ಎರಡು ಬಾರಿ ಶಾಸಕರಾಗಿದ್ದರು. ಅವರು ಪ್ರಾಮಾಣಿಕವಾದಂಥ ರಾಜಕಾರಣಿಯಾಗಿದ್ದರು. ಅವರು 25 ವರ್ಷಗಳ ಕಾಲ ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾಗಿ, ರಾಜ್ಯ ಎಸ್.ಎಲ್.ಡಿ. ಮತ್ತು ಗೃಹ ನಿರ್ಮಾಣ ಸಂಸ್ಥೆಗಳ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದಾರೆ. ಶ್ರೀ ಸಿದ್ದಗಂಗಾ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ. ಅವರ ಅಗಲಿಕೆಗೆ ತಾವು ತಂದಿರುವ ಸಂತಾಪ ಸೂಚನಾ ನಿರ್ಣಯಕ್ಕೆ ಬೆಂಬಲ ವ್ಯಕ್ತಪಡಿಸಿ, ಅವರ ಕುಟುಂಬಕ್ಕೆ ಅವರ ಸಾವಿನಿಂದ ಉಂಟಾಗಿರುವ ದುಃಖವನ್ನು ಭರಿಸುವಂಥ ಶಕ್ತಿಯನ್ನು ಭಗವಂತ ಕೊಡಲಿ ಎಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ): ಮಾನ್ಯ ಸಭಾಧ್ಯಕ್ಷರೆ, ವಿ.ಎಲ್.ಶಿವಪ್ಪನವರ ನಿಧನದ ವಾರ್ತೆಯ ಹಿನ್ನಲೆಯಲ್ಲಿ ಸಭಾನಾಯಕರು ಮತ್ತು ತಾವು ತಂದಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತಿಪಡಿಸುತ್ತೇನೆ. ಶಿವಪ್ಪನವರು ನನ್ನ ತಾಲ್ಲೂಕಿನವರು. ಆದರೆ ಅವರು ತಿಪಟೂರು ತಾಲ್ಲೂಕಿಗೆ ಹೋಗಿ ನೆಲೆಸಿದ್ದರು. ಅಂದಿನ ಕಾಲದಲ್ಲಿ ಪಿಎಸ್‌ಪಿಗೆ ಶಕ್ತಿ ಕೊಟ್ಟವರಲ್ಲಿ ಕೆಲವು ಜನರಿದ್ದರು. ಅವರಲ್ಲಿ ಶಿವಪ್ಪನವರು ಬಹಳ ಮುಖ್ಯಸ್ಥರು.ತುಮಕೂರು ಜಿಲ್ಲೆಯಲ್ಲಿ ಪಿಎಸ್‌ಪಿ ಬಹಳಷ್ಟು ಬೃಹದಾಕಾರವಾಗಿ ಬೆಳೆದಿತ್ತು. ಅದಕ್ಕೆ ಮೂಲ ಕಾರಣರೆಂದರೆ ವಿ.ಎಲ್.ಶಿವಪ್ಪನವರು. ಅವರ ಸಮಕಾಲೀನರಾಗಿದ್ದಂಥ ಈ ಮನೆಯ ಸದಸ್ಯರಾಗಿದ್ದಂಥ ಲಕ್ಕಪ್ಪನವರು, ಭಗವಾನ್‌ರವರು ಮತ್ತು ಎಸ್.ಎಂ.ಕೃಷ್ಣರವರು, ಇವರೆಲ್ಲರೂ ಅವರ ಅನುಯಾಯಿಗಳಾಗಿ ಕೆಲಸ ಮಾಡಿ ಪಿಎಸ್‌ಪಿಯನ್ನು ಬಹಳ ಬಲವಾಗಿ ಬೆಳೆಸುವಂಥ ಕೆಲಸವನ್ನು ಮಾಡಿದ್ದರು. ಅವರು ಎರಡು ಬಾರಿ ಶಾಸಕರಾಗಿದ್ದರು.

ನನ್ನ ಜೊತೆಯಲ್ಲಿ ಸಹ ಶಾಸಕರಾಗಿದ್ದಂಥವರು. ಇಡೀ ರಾಜ್ಯದಲ್ಲಿ ಸಹಕಾರ ಕ್ಷೇತ್ರದಲ್ಲಿ ಹೆಸರಿಸಬಹುದೆಂದರೆ ಅವರು ಬಿ.ಎಲ್. ಶಿವಪ್ಪನವರು. ಅವರು ಸಹಕಾರಿ ಕ್ಷೇತ್ರದಲ್ಲಿ ಮಾತ್ರ ಯಾವತ್ತೂ ಕೂಡವಿನಾಕಾರಣ ರಾಜಕಾರಣ ಮಾಡುತ್ತಿರಲಿಲ್ಲ. ಪ್ರತಿ ಚುನಾವಣೆಯಲ್ಲೂ ಸಹ ಭಾಗವಹಿಸುತ್ತಿದ್ದರು, ಸಂಘಟಿಸುವ ಕೆಲಸವನ್ನು ಮಾಡುತ್ತಿದ್ದರು. ಆ ಕಾರಣಕ್ಕೋಸ್ಕರ ಸಹಕಾರಿ ಕ್ಷೇತ್ರ ಎನ್ನತಕ್ಕಂಥದ್ದು ಇನ್ನೂ ಜೀವಂತವಾಗಿ, ಬಹಳ ಬಲಯುತವಾಗಿ ಉಳಿದಿರುವುದು ತುಮಕೂರು ಜಿಲ್ಲೆಯಲ್ಲಿ ಎನ್ನುವ ಮಾತನ್ನು ಹೇಳಿ, ಅವರ ಅಗಲಿಕೆ ಇವತ್ತು ನಮಗೆಲ್ಲರಿಗೂ ಕೂಡ ಸಹಕಾರಿ ಸಂಘಗಳಿಗಿಚಿತ ಹೆಚ್ಚಾಗಿ ಬಹಳಷ್ಟು ನೋವನ್ನು ತಂದಿದೆ ಎನ್ನುವ ಮಾತನ್ನು ಹೇಳುತ್ತಾ, ಅವರು ಮಾಡಿರತಕ್ಕಂಥ ಕೆಲಸವನ್ನು, ಅವರು ಕೊಟ್ಟಿರುವಂಥ ಕೊಡುಗೆಯನ್ನು ಅದು ಸಹಕಾರಿ ಕ್ಷೇತ್ರದಲ್ಲಿರಬಹುದು, ವಿಧಾನಸಭೆಯಲ್ಲಿರಬಹುದು ಎಲ್ಲವನ್ನು ನಾವು ನೆನೆಸುವ ಕೆಲಸವನ್ನು ಮಾಡೋಣವೆನ್ನುವ ಮಾತನ್ನು ಹೇಳಿ ತಾವು ತಂದಿರುವ ಸಂತಾಪ ಸೂಚನೆಗೆ ಸಹಮತವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ದಿವಂಗತರಾದ ಬಿ.ಎಲ್.ಶಿವಪ್ಪನವರಿಗೆ ಗೌರವ ಸ್ರಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷಮೌನವನ್ನಾಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

2. ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೋರಿಕೆ

ವಿಷಯ: ಸಹಕಾರಿ ಇಲಾಖೆಯ ಬಗ್ಗೆ ಸಹಕಾರಿ ಸಚಿವರು ಹೇಳಿಕೆ ನೀಡಿರುವ ಬಗ್ಗೆ

ಶ್ರೀ ವೆಂಕಟರಾವ್ ನಾಡಗೌಡ: ಮಾನ್ಯ ಅಧ್ಯಕ್ಷರೆ, ನಿಯಮ 60ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ನಾವು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಅದಕ್ಕೆ ತಾವು ಅವಕಾಶ ಮಾಡಿಕೂಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಹಕಾರ ಸಚಿವರು ಹೇಳಿಕೆ ಕೊಟ್ಟಿರುವುದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮಗೆ ಮನವಿಯನ್ನು ಕೊಟ್ಟಿದ್ದೇವೆ. ದಿನಾಂಕ 17ರಂದು ಸನ್ಮಾನ್ಯ ಸಹಕಾರಿ ಸಚಿವರು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರ ಹೇಳಿಕೆಯನ್ನು ನೋಡಿದಾಗ, ಒಬ್ಬ ಸಹಕಾರಿಯಾಗಿ ನನಗೆ ಬಹಳ ಕಷ್ಟ ಎನಿಸುತ್ತದೆ. ಏಕೆಂದರೆ, ಸದನ ನಡೆಯುವ ಸಂದರ್ಭದಲ್ಲಿ ಸಹಕಾರ ಸಚಿವರೇ ಈ ತರಹ ಹೇಳಿಕೆ ಕೊಟ್ಟರೆ, ಸಹಕಾರ ಇಲಾಖೆ ದಾರಿ ತಪ್ಪಿದೆ, ಹಿಂದಿನವರು ಯಾರು ಕೆಲಸ ಮಾಡಿಲ್ಲ ಎನ್ನುವಂಥ ಭಾವನೆ ಬರುತ್ತದೆ. ನಾವೂ ಸಹ ಸಹಕಾರಿಗಳಾಗಿ ಕೆಲಸ ಮಾಡಿದ್ದೇವೆ. ಉತ್ತಮ ಸಹಕಾರಿ ಸಂಸ್ಥೆಗಳು ಈ ರಾಜ್ಯದಲ್ಲಿ ಇವೆ. ಆದರೂ ಕೂಡ ಈ ತರಹದ ಹೇಳಿಕೆ ಕೊಟ್ಟಿರುವುದರಿಂದ ನಾನು ಒಬ್ಬ ಸಹಕಾರಿಯಾಗಿ ಇದನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ನಿಯಮಯ 60ರ ಅಡಿಯಲ್ಲಿ ಅನುವು ಮಾಡಿಕೊಡಬೇಕೆಂದು ನಾವು ಕೇಳಿದ್ದೇವೆ. ಅದಕ್ಕೆ ಅನುವು ಮಾಡಿಕೊಡಬೇಕೆಂದು ನಾವು ತಮ್ಮಲ್ಲಿ ವಿನಂತಿ ಮಾಡುತ್ತೇವೆ. ದಯವಿಟ್ಟು, ತಾವು ಇದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಬಿ.ಜೆ. ಪುಟ್ಟಸ್ವಾಮಿ(ಸಹಕಾರಿ ಸಚಿವರು): ನಾನು ಈ ನಿಲುವಳಿ ಸೂಚನೆಯನ್ನು ನೋಡಿದ್ದೇನೆ. ನನ್ನ 40 ವರ್ಷಗಳ ರಾಜಕೀಯ ಇತಿಹಾಸದಲ್ಲಿ ಇಂಥ ವಿಷಯಕ್ಕೆ ನಿಲುವಳಿ ಸೂಚನೆಯನ್ನು ಕೊಡತಕ್ಕಂಥದ್ದನ್ನು ನಾನು ಶಾಸಕನಾಗಿಯೂ ನೋಡಿಲ್ಲ ಅಥವಾ ಹೊರಗಡೆಯೂ ನೋಡಿಲ್ಲ. ಯಾವ ಸಂದರ್ಭದಲ್ಲಿ ಯಾವ ವಿಚಾರವನ್ನು ಹೇಳಿರುತ್ತೇನೆ ಎನ್ನತಕ್ಕಂಥದ್ದರ ಬಗ್ಗೆ ಪತ್ರಿಕೆಗಳಲ್ಲಿ ಬರುವ ವಿಚಾರಗಳನ್ನು ಸದನದಲ್ಲಿ ಪ್ರಸ್ತಾಪ ಮಾಡುವುದು ಎಂದರೆ ಹೇಗೆ? ಯಾವುದೇ ಒಂದು ನಿರ್ದಿಷ್ಟ ವಿಚಾರದಲ್ಲಿ ಯಾರ ಮೇಲೆಯೂ